

ಗ್ಲೌಸ್ ಕಳಚಿ ದಣಿದು ಕೂತ ‘ಜೆರ್ಸಿ’ ಸಿನಿಮಾದ ಈ ದೃಶ್ಯ ಬಾಲಿವುಡ್‌ನ ಸದ್ಯದ ಪರಿಸ್ಥಿತಿಯನ್ನೂ ಬಿಂಬಿಸುವ ಹಾಗಿದೆಯಲ್ಲವೇ?

ಜನ ಯಾಕೆ ಒಂದು ಸಿನಿಮಾ ನೋಡುತ್ತಾರೆ ಎಂದು ಕೈಯಾಡಿಸಿಬಿಟ್ಟಿದ್ದರು. ಆ ವಸ್ತುವನ್ನು ಚಿ. ಉದಯ್‌ಶಂಕರ್ ಅವರೊಟ್ಟಿಗೆ ನೂರ್ ಹಂಚಿಕೊಂಡರು. ವರದಪ್ಪನವರ ಕಿವಿಗೆ ಉದಯ್‌ಶಂಕರ್ ಹಾಕಿ, ಆಮೇಲೆ ನಿರ್ದೇಶಕ ಜೋಡಿ ದೊರೈ–ಭಗವಾನ್ ಅವರಿಗೂ ತಿಳಿಸಿ, ಸ್ಕ್ರಿಪ್ಟ್ ತಯಾರಾಯಿತು. ಅಣ್ಣಾವ್ರಿಗೆ ಆ ಕಥೆಯನ್ನು ಹೇಳಿದ ಮೇಲೆ, ಅವರೂ ಶಿವಾಜಿ ಗಣೇಶನ್ ತಿರಸ್ಕರಿಸಿದ ಸಿನಿಮಾ ಮಾಡುವುದು ರಿಸ್ಕೇ ಅಲ್ಲವೇ ಎಂದಿದ್ದರು. ಕೊನೆಗೆ ಅವರ ಮನವೊಲಿಸಿ, ದೊಡ್ಡ ಸೆಟ್ ಹಾಕಿ ಸಿನಿಮಾ ಚಿತ್ರೀಕರಣವಾಯಿತು. ತಮಿಳಿನ ನಿರ್ಮಾಪಕರಿಗೆ ಅವರು ಮಾಡಿದ್ದ ಅಷ್ಟೂ ಖರ್ಚನ್ನು ನೀಡಿ, ಕಥೆಯ ಹಕ್ಕನ್ನು ಖರೀದಿಸಿ ತಂದಿದ್ದರು. ಇಡೀ ಕಸ್ತೂರಿ ನಿವಾಸ ಸಿನಿಮಾ ಚಿತ್ರೀಕರಣ ನಡೆದದ್ದು ಹತ್ತೊಂಬತ್ತೂವರೆ ದಿನ. ಅದು ಒಂದು ವರ್ಷ ರಾಜ್ಯದ ವಿವಿಧ ಚಿತ್ರಮಂದಿರಗಳಲ್ಲಿ ಓಡಿತು. ಅದನ್ನು ನೋಡಿದ ಶಿವಾಜಿ ಗಣೇಶನ್, ‘ಐ ಆ್ಯಮ್ ಎ ಫೂಲ್’ ಎಂದು ಉದ್ಗರಿಸಿದ್ದರಂತೆ. ಅಷ್ಟೇ ಅಲ್ಲ, ಆಮೇಲೆ ಅದನ್ನೇ ಅವರು ತಮಿಳಿನಲ್ಲಿ ರೀಮೇಕ್ ಮಾಡಿ ಸೋತದ್ದೂ ಸತ್ಯ. ‘ಕಸ್ತೂರಿ ನಿವಾಸ’ ಚಿತ್ರವನ್ನು ಹಿಂದಿಯಲ್ಲಿ ‘ಶಾಂದಾರ್’ ಹೆಸರಿನಲ್ಲಿ ರೀಮೇಕ್ ಮಾಡಿದರು. ಅದು ಜನರನ್ನು ಸೆಳೆಯಲಿಲ್ಲ. ಇವತ್ತಿಗೂ ಕನ್ನಡದ ‘ಕಸ್ತೂರಿ ನಿವಾಸ’ವೇ ಎಲ್ಲರ ನೆನಪಿನಲ್ಲಿ ಉಳಿದಿರುವುದು. ಇದಕ್ಕೆ ಮುಖ್ಯ ಕಾರಣ ಅದನ್ನು ಇಲ್ಲಿನ ಮಣ್ಣಿನ ಚಿತ್ರವನ್ನಾಗಿಸಿದ್ದು ಎಂದೇ ಭಗವಾನ್ ಯಾವಾಗಲೂ ಹೇಳುತ್ತಿರುತ್ತಾರೆ. ಜಿ.ಕೆ. ವೆಂಕಟೇಶ್ ಅವರು ಆ ಸಿನಿಮಾಗೆ ಸಂಯೋಜನೆ ಮಾಡಿದ ಮಟ್ಟುಗಳು ಈಗಲೂ ಕಾಡುತ್ತವೆ. ‘ಆಡಿಸುವಾತ ಬೇಸರ ಮೂಡಿ’ ಹಾಡಿನ ಲಯವೇ ಅಲ್ಲವೇ ಈಗ ‘ಬೊಂಬೆ ಹೇಳುತ್ತೈತೆ’ ಎಂದು ಆದದ್ದು.

ಈಗ ಸಿನಿಮಾ ನಿರ್ಮಾಣದ ಸ್ವರೂಪವೇ ಬದಲಾಗಿದೆ. ‘ಪುಷ್ಪಾ–ದಿ ರೈಸಿಂಗ್’ ಚಿತ್ರಕ್ಕೆ 210 ದಿನಗಳಷ್ಟು ಚಿತ್ರೀಕರಣವನ್ನು ನಿರ್ದೇಶಕ ಸುಕುಮಾರ್ ನಡೆಸಿದ್ದರು. ‘ಆರ್‌ಆರ್‌ಆರ್’ ಏನಿಲ್ಲವೆಂದರೂ ಮುನ್ನೂರು ದಿನಗಳಷ್ಟು ಚಿತ್ರೀಕರಣ ನಡೆಸಿದ ಸಿನಿಮಾ. ‘ಕೆಜಿಎಫ್2’ ಕೂಡ ಎರಡು ವರ್ಷಗಳಿಗೂ ಹೆಚ್ಚು ಅವಧಿ ತೆಗೆದುಕೊಂಡೇ ಚಿತ್ರೀಕರಣ ಪೂರೈಸಿದ್ದು. ನಟರು–ತಂತ್ರಜ್ಞರು ಇಷ್ಟು ಸುದೀರ್ಘಾವಧಿ ಒಂದು ಸಿನಿಮಾಕ್ಕಾಗಿಯೇ ತಮ್ಮ ತನು–ಮನವನ್ನು ಅರ್ಪಿಸಿಕೊಂಡು ಮಾಡಬೇಕಾದ ಧ್ಯಾನದಂತೆ ಇದು. ಇನ್ನು ಸರಣಿ ಚಿತ್ರಗಳಾದರೆ, ಅವರ ವೃತ್ತಿ ಬದುಕಿನ ಅದೆಷ್ಟು ಅವಧಿಯನ್ನು ಕೊಟ್ಟಂತಾಗುತ್ತದೆ ಎಂದು ಯೋಚಿಸಬಹುದು. ‘ಬಾಹುಬಲಿ’ ಸರಣಿ ಚಿತ್ರಗಳಿಗಾಗಿ ವರ್ಷಗಟ್ಟಲೆ ಸಮಯ ನೀಡಿದ ನಟ ಪ್ರಭಾಸ್ ಉದಾಹರಣೆ ಎದುರಲ್ಲಿದೆ. ಆನಂತರ ಪ್ರಭಾಸ್ ‘ಸಾಹೊ’ ಹಾಗೂ ‘ರಾಧೆ ಶ್ಯಾಮ್’ ಚಿತ್ರಗಳಲ್ಲಿ ಮೋಡಿ ಮಾಡಲು ಆಗಲಿಲ್ಲ. ಈಗ ‘ಕೆಜಿಎಫ್’ ಸೃಷ್ಟಿಕರ್ತ ಪ್ರಶಾಂತ್ ನೀಲ್ ಅವರದ್ದೇ ‘ಸಲಾರ್’ನಲ್ಲಿ ಅವರು ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ.

ಗೆದ್ದ ಸಿನಿಮಾಗಳಲ್ಲಿ ತೊಡಗಿದವರು ಪರಸ್ಪರ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಿರುವುದು ಇನ್ನೊಂದು ಸ್ವಾಗತಾರ್ಹ ಬೆಳವಣಿಗೆ. ಸುಕುಮಾರನ್ ಸೃಷ್ಟಿಸುವ ಬೇರೆಯದೇ ಜಗತ್ತು ಹಾಗೂ ಅದರಲ್ಲಿನ ನಾಯಕನ ನಿರ್ಭಿಡೆಯ ವ್ಯಕ್ತಿತ್ವ ಸಿನಿಮಾದಲ್ಲಿನ ಹುಳುಕುಗಳನ್ನೂ ಮುಚ್ಚಿಹಾಕಿ ನೋಡಿಸಿಕೊಳ್ಳುವಂತೆ ಮಾಡುತ್ತದೆ ಎಂದು ನಿರ್ದೇಶಕ ರಾಜಮೌಳಿ ಶ್ಲಾಘಿಸಿದ್ದರು. ಯಶ್ ಅವರಿಗೆ ಶುಭಕೋರಿ ಅಲ್ಲು ಅರ್ಜುನ್ ಟ್ವೀಟ್ ಮಾಡಿದ್ದೂ ಮತ್ತೊಂದು ಗಮನಾರ್ಹ ಸಂಗತಿ. ‘ಯಶ್‌ಗಾರು’ ಎಂದು ಉಲ್ಲೇಖಿಸಿದ್ದ ಆ ಟ್ವೀಟ್‌ಗೆ ಪ್ರತಿಕ್ರಿಯಿಸುವಾಗ ಯಶ್, ‘ಅಲ್ಲು ಅರ್ಜುನ್ ಅವರೇ...’ ಎಂದು ಸಂಬೋಧಿಸಿದ್ದನ್ನು ಅಸಂಖ್ಯ ಪ್ರೇಕ್ಷಕರು ಮೆಚ್ಚಿದ್ದು, ನಾಯಕನಟರು ಹೇಗೆಲ್ಲ ಜನಸಂಪರ್ಕ ಸಾಧಿಸುತ್ತಾರೆನ್ನುವುದಕ್ಕೆ ಸಾಕ್ಷಿ.



ಪ್ರಶಾಂತ್ ನೀಲ್ ಬತ್ತಳಿಕೆಯಿಂದ ‘ಸಲಾರ್’ ಎಂಬ ಇನ್ನೊಂದು ಬಾಣ ಹೆದೆಯೇರಿ, ಬಾಲಿವುಡ್ ಕಡೆಗೇ ಗುರಿನೆಟ್ಟಿದೆ.